ಮತ್ತು ಇಲ್ಲಿಂದ ಗ್ರಾಮಪಂಚಾಯತ್ ಮುಖಾಂತರ ಕೊಡಬೇಕೆಂದು ಸರ್ಕಾರ ಇತ್ತೀಚೆಗೆ ಮಾಡಿರತಕ್ಕಂಥ ಆದೇಶ ನೋಡಿದರೆ ನಿಜವಾಗಿಯೂ ಕೂಡ ಇದೊಂದು ವಿಚಿತ್ರವೆನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನಗೆ ಬೇರೆ ದಾರಿಯಿಲ್ಲ. ನಾನು ಬೇರೆ ಏನನ್ನೂ ಕೂಡ ಮಾತನಾಡುವುದಿಲ್ಲ. ಸರ್ಕಾರದ ನಿರ್ಧಾರದ ಬಗ್ಗೆ ನಾನು ಇಲ್ಲಿ ಧರಣಿ ಮಾಡುತ್ತೇನೆ. ಪರಿಸ್ಥಿತಿ ನಿಜಕ್ಕೂ ಕೂಡ ಬಹಳ ನೋವಿನಿಂದ ಕೂಡಿದೆ. ಆ ಜನರೆಲ್ಲರು ಇವತ್ತಿನ ದಿವಸ ಇಲ್ಲಿಗೆ ಬಂದಿದ್ದರು. ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆಂದು ತಾವು ಸ್ಪಷ್ಟವಾಗಿ ಇಲ್ಲಿ ಹೇಳಬೇಕು.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಸದನದ ಬಾವಿಗೆ ಬಂದರು)

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿ ಕೊಳ್ಳುವುದೇನೆಂದರೆ. ಸರ್ಕಾರದವರು ಈ ವಿಚಾರದಲ್ಲಿ ಹಿಂದಕ್ಕೆ ಹೋಗತಕ್ಕಂಥ ಪ್ರಶ್ನೆಯೇ ಇಲ್ಲ. ಇಲ್ಲಿ ಬಂದಿರತಕ್ಕಂಥ ಪ್ರಶ್ನೆ ಏನೆಂದರೆ, ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿ ಇಲ್ಲದೆ ಇರುವುದರಿಂದ ಇದರ ಬಗ್ಗೆ ತತ್‌ಕ್ಷಣ ಉತ್ತರ ಕೊಡುವುದಕ್ಕೆ ಆಗುವುದಿಲ್ಲವೆಂದು ನಾನು ಹೇಳಿದ್ದೇನೆ. ಆದರೆ, ಮಾನ್ಯ ಶ್ರೀರಾಮರೆಡ್ಡಿಯವರು ಈಗಾಗಲೇ ಪ್ರಸ್ತಾಪ ಮಾಡಿದಂತೆ. 'Legislation to give effect to the provisions of this part ಎಂದು ಹೇಳಿ Not withstanding anything in this Constitution, Parliament shall have and the Legislature of the State shall not have power to make laws' ಎಂದು ಕೆಲವು ಮಾಹಿತಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಸುಪ್ರೀಂ ಕೋರ್ಟ್‌ನ ತೀರ್ಮಾನ ಮತ್ತು ಆರ್ಟಿಕಲ್ 35ರ ಕೆಳಗೆ ಏನು ಮಾಡಲಿಕ್ಕೆ ಸಾಧ್ಯಕ್ಕೆ ಆಗುತ್ತದೆ ಎಂಬುದರ ಬಗ್ಗೆ ನಾವು ಇದನ್ನು ಕಾನೂನು ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಅದು ಕಾನೂನು ಇಲಾಖೆಯಿಂದ ಬಂದ ತಕ್ಷಣವೇ ಅದನ್ನು ಮಾಡಿಕೊಡುತ್ತೇವೆ. ತಾವು ಬಹಳ ತೀವ್ರವಾದಂಥ ಭಾವನೆಯನ್ನು ವ್ಯಕ್ತ ಮಾಡಿದ್ದೀರಿ, ಇದನ್ನು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ತಿಳಿಸುತ್ತೇನೆ. ಇಲ್ಲದಿದ್ದರೆ ನಾನೇ ನೇರವಾಗಿ ಸದನ ಮುಗಿಯುವುದರೊಳಗೆ ತಿಳಿದುಕೊಳ್ಳುತ್ತೇನೆ. ಆನಂತರ ತಮಗೆ ಪತ್ರ ಬರೆದು ಕಳುಹಿಸಿಕೊಡುತ್ತೇನೆ. ಆದ್ದರಿಂದ ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ವಾಪಸ್ಸು ಬಂದರು)